ದಿನಾಂಕಃ 2.9.2026 ಎಂ.ವಿ.ಸಿ.ನಂಃ 215/2025 ಆರ್.ಡಬ್ಲೂ.1

ಸಾಕ್ಷಿಯನ್ನು ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಅರ್ಜಿದಾರರ ಪರ ಶ್ರೀ ಆರ್ ಎಂ ವಕೀಲರಿಂದ

ನಾನು ಟ್ರ್ಯಾಕ್ಟರ್ ನ ಮಾಲೀಕ. 3 ನೇ ಎದುರುದಾರ ರಮೇಶ್ ನನ್ನ ಟ್ರ್ಯಾಕ್ಟರ್ ನಲ್ಲಿ ಚಾಲಕ ಆಗಿದ್ದರು. ಮರಿಯಮ್ಮನ ಹಳ್ಳಿ ಪೋಲೀಸರು 3 ನೇ ಎದುರುದಾರರನ್ನು 1 ನೇ ಆರೋಪಿ ಎಂದು ಹಾಗೂ 1 ನೇ ಎದುರುದಾರರನ್ನು 2 ನೇ ಆರೋಪಿ ಎಂದು ಪ್ರಕರಣ ದಾಖಲಿಸಿ ತನಿಖೆ ಮಾಡಿ ದೋಷಾರೋಪಣಾ ವರದಿ ಸಲ್ಲಿಸಿದ್ದಾರೆ ಎಂದರೆ ಸರಿ. ದೋಷಾರೋಪಣಾ ವರದಿಯಲ್ಲಿ ನನ್ನನ್ನು 3 ನೇ ಆರೋಪಿಯಾಗಿ ತೋರಿಸಿದ್ದಾರೆ ಎಂದರೆ ಸರಿ.

ನನ್ನ ಪ್ರಮಾಣ ಪತ್ರ ದಲ್ಲಿ ಹೇಳಿರುವಂತೆ ಆ ದಿವಸ ನಮ್ಮ ಟ್ರೈಲರ್ ನಲ್ಲಿ ಯಾವುದೆ ಲೋಡ್ ಇರಲಿಲ್ಲ ಮತ್ತು ನಮ್ಮ ಚಾಲಕರ ತಪ್ಪಿನಿಂದಲೇಲ ಅಪಘಾತಕ್ಕೆ ಕಾರಣ ಆಗಿದೆ ಎಂದರೆ ಸರಿಯಲ್ಲ. ನಾನು 1 ನೇ ಎದುರುದಾರರ ವಿರುದ್ಧ ದುಾರು ಕೊಡಲು ಪ್ರಯತ್ನ ಮಾಡಿದ್ದೆ ಆದರೆ ದೂರು ಕೊಡಲಿಲ್ಲ. ಟ್ರ್ಯಾಕ್ಟರ್ ಬಳಿ ಇಬ್ಬರನ್ನು ನಿಲ್ಲಿಸಿ ಎಲ್ಲಾ ಕ್ರಮಗಳನ್ನು ತೆಗೆದುಕೊಂಡಿದ್ದೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನಿಆರ್ 1 ರಿಂದ 4 ಪೋಟೋಗಳನ್ನು ಬೆಳಗಿನ ವೇಳೆ ತೆಗೆಯಲಾಗಿದೆ ಎಂದರೆ ಸರಿ. ಅಪಘಾತ ರಾತ್ರಿ ವೆೇಳೆ ಆಗಿದೆ ಎಂದರೆ ಸರಿಯಲ್ಲ ಸಂಜೆ ಸುಮಾರು 5-45 ರ ವೇಳೆ ಆಗಿದೆ. ಪ್ರಥಮ ವರ್ತಮಾನ ವರದಿಯಲ್ಲಿ ಅಪಘಾತ ರಾತ್ರಿ 7-20 ರ ವೇಳೆ ಆಗಿದೆ ಎಂದು ಬರೆದಿದ್ದಾರೆ ಎಂದರೆ ಅದು ಸುಳ್ಳು ಎಂದು ಹೇಳುತ್ತೇನೆ. ಅಪಘಾತ ಆದ ನಂತರ ಮಾರನೇ ದಿವಸ ಬೆಳಿಗ್ಗೆ ಕೇಸಿಗಾಗಿ ಕಲ್ಲುಗಳನ್ನು ಇಟ್ಟು ಪೋಟೋ ತೆಗೆಸಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಪರಿಹಾರ ಕೊಡುವುದರಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿ ಹೇಳಲು ಬಂದಿದ್ದೇನೆ ಎಂದರೆ ಸರಿಯಲ್ಲ. ಟ್ರ್ಯಾಕ್ಟರ್ ಕೆಟ್ಟು ನಿಂತಾಗ ರಸ್ತೆಯಲ್ಲಿ ಸೂಕ್ತ ಕ್ರಮಗಳನ್ನು ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ - ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸರಿ ಇದೆ.

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**